

# ಪಶುಜನ್ಯ ಕಾಯಿಲೆ

ಮಂಗನಕಾಯಿಲೆ ಸೇರಿದಂತೆ ಅನೇಕ ರೋಗಗಳು ಪಶುಜನ್ಯ ವೈರಾಣುಗಳಿಂದ ಮನುಷ್ಯನಿಗೆ ಬಾಧೆ ಕೊಡುತ್ತವೆ. ಪ್ರಾಣಿಗಳು ಸತ್ತ ಮೇಲೆ ಸರಿಯಾಗಿ ಹೂಳದೆ ಎಲ್ಲೆಂದರಲ್ಲಿ ಬಯಲಲ್ಲಿ ಎಸೆಯುವುದರಿಂದಲೂ ರೋಗ ಹರಡಬಹುದು. ನಮ್ಮಲ್ಲಿ ಪ್ರಾಣಿಜನ್ಯ ರೋಗಗಳು ಸಾಕಷ್ಟಿವೆ. ಅವುಗಳಲ್ಲಿ ಟೈಫಾಯ್ಡ್, ಇಲಿ ಜ್ವರ, ಆಂಥ್ರಾಕ್ಸ್, ಕಾಲರಾ ಮುಖ್ಯವಾದವು.

■ ಡಾ. ಯುವರಾಜ ಹೆಗಡೆ

ರೋಗಕಾರಕ ಸೂಕ್ಷ್ಮಾಣು ಜೀವಿಗಳು ಅದರಲ್ಲೂ ಮುಖ್ಯವಾಗಿ ವೈರಸ್‌ಗಳು ತನ್ನ ಉಳಿವಿಗಾಗಿ ಸಂಗ್ರಾಹಕ (**reservoir host**) ಜೀವಿಗಳನ್ನು ಅವಲಂಬಿಸಿರುತ್ತದೆ. ಆ ಸಂಗ್ರಾಹಕ ಜೀವಿಗಳು ಹೆಚ್ಚಿನ ಸಂದರ್ಭಗಳಲ್ಲಿ ಕಾಡಿನಲ್ಲಿ ವಾಸಿಸುವ ಜೀವಿಗಳೇ ಆಗಿರುತ್ತವೆ ಮತ್ತು ಸಂಗ್ರಾಹಕ ಜೀವಿಗಳಿಗೆ ಅವು ಯಾವುದೇ ತೊಂದರೆಯನ್ನು ನೀಡುವುದಿಲ್ಲ. ಆದರೆ ಅದು ಗುರಿಯಾಗಿಸುವ ಕೆಲವು ನಿರ್ದಿಷ್ಟ ಪ್ರಭೇದದ ಜೀವಿಗಳು ಮಾತ್ರ ತೊಂದರೆಗೆ ಒಳಗಾಗುತ್ತವೆ (**Susceptible**). ಹೀಗೆ ಸಂಗ್ರಾಹಕ ಜೀವಿಗಳಲ್ಲಿಯ ವೈರಸ್‌ಗಳು ಯಾವುದಾದರೂ ಒಂದು ಪ್ರಬೇಧದ ಜೀವಿಗಳನ್ನು ಗುರಿಯನ್ನಾಗಿಸಿ ರೋಗ ಪ್ರಸಾರ ಮಾಡಬೇಕಾದಾಗ ಸೋಂಕಿಗೆ ಒಳಗಾಗುವ ಪ್ರಾಣಿಯು ಸಂಗ್ರಾಹಕ ಜೀವಿಗಳ ಸಂಪರ್ಕಕ್ಕೆ ನೇರವಾಗಿ ಅಥವಾ ಪರೋಕ್ಷವಾಗಿ ಬಂದಿರಲೇಬೇಕು. ಆದರೆ ಹಿಂದೆಂದೂ ಕಾಣದ ವೈರಸ್ ಅಥವ ರೂಪಾಂತರಗೊಂಡ ವೈರಾಣು ಅಚಾನಕ್ ಆಗಿ ಕಾಣುವುದಾದರೂ ಹೇಗೆ ಎಂಬ ಪ್ರಶ್ನೆ ನಮ್ಮೆಲ್ಲರನ್ನೂ ಕಾಡುವುದು ಸಹಜವೇ.

ಇಂದಿನ ಕೊರೊನಾ ವೈರಸ್‌ಗಳು ಚೀನಾದ ವುಹಾನ್‌ನಲ್ಲಿ ಕಾಣಿಸಿಕೊಳ್ಳಲು ಇದೇ ಕಾರಣವಾಗಿರುತ್ತದೆ ಕೂಡ. ಅಲ್ಲಿಯ ಜನರ ವಿಚಿತ್ರ, ನೈಸರ್ಗಿಕವಲ್ಲದ, ಅಸ್ವಭಾವಿಕ ಆಹಾರ ಪದ್ಧತಿಗಳಿಂದಾಗಿ ಅವರು ನಿರಂತರವಾಗಿ ಅಲ್ಲಿ ದೊರಕುವ ಹಾವು, ಚೇಳು, ಇತರೆ ಸರೀಸೃಪಗಳು, ಬಾವಲಿಗಳು, ನಾಯಿನರಿಗಳು, ಇಲಿಹೆಗ್ಗಣಗಳು, ಪುನಗು, ಚಿಪ್ಪು, ಮುಳ್ಳು ಹಂದಿ ಇತ್ಯಾದಿಗಳನ್ನು ನಿರಂತರವಾಗಿ ಭಕ್ಷಿಸಲಾರಂಭಿಸಿದಾಗ ಯಾವುದೋ ಸಂಗ್ರಾಹಕ ಪ್ರಾಣಿಗಳಲ್ಲಿ ಅಡಗಿದ್ದ ವೈರಸ್‌ಗಳ ಜೊತೆಗೆ ನಿರಂತರ ಸಂಪರ್ಕಕ್ಕೆ ಬಂದ ಮನುಷ್ಯನಿಗೆ ರೂಪಾಂತರಗೊಂಡ ವೈರಸ್‌ಗಳು ದಾಳಿ ಇಟ್ಟಿವೆ. ಮೊದಲ ಬಾರಿ ದಾಳಿ ಇಟ್ಟಾಗ ವೈರಸ್‌ಗಳು ತೀವ್ರ ಸ್ವರೂಪವನ್ನು ತಳೆದಿರುತ್ತವೆ ಹಾಗೂ ದಿಢೀರನೆ ಅವುಗಳಿಂದ ಉದ್ಭವಿಸುವ ಸಮಸ್ಯೆಗೆ ನಮ್ಮಲ್ಲಿ ಸರಿಯಾದ ಪರಿಹಾರೋಪಾಯಗಳು ಇರುವುದಿಲ್ಲ. ಹಾಗಾಗಿಯೇ ಕೊರೊನಾ ಇಂದು ಜಗತ್ತಿನಾದ್ಯಂತ ರಣಕೇಕೆ ಹೊಡೆದು ಲಕ್ಷಾಂತರ ಜನರನ್ನು ಬಾಧಿಸಿದೆ.

ನಮ್ಮ ದೇಶದಲ್ಲಿ ಕುರಿಮೇಕೆ, ಹಂದಿ, ಕೋಳಿಗಳನ್ನು ವಧೆ ಮಾಡಲು ಮತ್ತು ಮಾಂಸ ಮಾರಾಟ ಮಾಡಲು ಸುಸಜ್ಜಿತ ವಧಾಗಾರಗಳೇ ಇಲ್ಲ. ಹತ್ತಿರದ ಪಟ್ಟಣ ಪಂಚಾಯತ್, ಸ್ಥಳೀಯ ಗ್ರಾಮಪಂಚಾಯತ್‌ನಿಂದಲೋ ಅನುಮತಿ ಪಡೆದು ಪ್ರಾರಂಭವಾಗುವ ಮಾಂಸ ಮಾರಾಟದ ಅಂಗಡಿಗಳು ನೈರ್ಮಲ್ಯದ ಬಗ್ಗೆ ಗಮನ ಹರಿಸುವುದು ಅಷ್ಟಕ್ಕಷ್ಟೆ. ಭಾರತದ ಯಾವುದೇ ಮಾರುಕಟ್ಟೆಗೆ ಭೇಟಿ ನೀಡಿದರೂ ದುರ್ಗಂಧ, 3050 ಬೀದಿ ನಾಯಿಗಳ ಗುಂಪು ವಧೆಗೊಳಗಾದ ಪ್ರಾಣಿಗಳ ತ್ಯಾಜ್ಯವನ್ನು ಎಳೆದು ತಂದು ಬೀದಿ ಬದಿಯಲ್ಲಿ ತಿನ್ನುತ್ತಿರುವ ದೃಶ್ಯವನ್ನು ಸರ್ವೇಸಾಮಾನ್ಯ. ಊರ ಮಾರಿಯ ಹಬ್ಬ ಹರಕೆಗಳಲ್ಲಿ ಪ್ರಾಣಿ ಬಲಿ ನಿಷೇಧಿಸಿದೆಯಾದರೂ ಯಾವ ಲೆಕ್ಕಕ್ಕೂ ತೆಗೆದುಕೊಳ್ಳದೆ ಸಾವಿರಾರು ಕುರಿಕೋಳಿಗಳ ವಧೆ ನಿರಂತರವಾಗಿ ನಡೆದೇ ಇದೆ. ಶುಚಿತ್ವದ ಕುರಿತಾಗಿ ಪಾಲಿಸಬೇಕಾದ ಎಲ್ಲಾ ಮಾರ್ಗಸೂಚಿಗಳನ್ನು ಸಾರಾಸಗಟಾಗಿ ಧಿಕ್ಕರಿಸುವ ಅನಧಿಕೃತ ಕಸಾಯಿಖಾನೆ ಮತ್ತು ಮಾಂಸ ಮಾರಾಟ ಕೇಂದ್ರಗಳಿಂದ ಹಬ್ಬಬಹುದಾದ ಪ್ರಾಣಿಜನ್ಯ ರೋಗಗಳು ಸಾಕಷ್ಟಿವೆ. ಅವುಗಳಲ್ಲಿ ಟೈಫಾಯ್ಡ್, ಇಲಿ ಜ್ವರ, ಆಂಥ್ರಾಕ್ಸ್, ಕಾಲರಾ ಮುಖ್ಯವಾದವು.

## ಜೀವ ಹಿಂಡುವ ಮಂಗನಕಾಯಿಲೆ

ಉತ್ತರಕನ್ನಡ ಭಾಗದಲ್ಲಿ ಸದ್ಯ ಮಂಗನಕಾಯಿಲೆಗೆ ಹಲವಾರು ಮಂದಿ ತುತ್ತಾಗಿದ್ದಾರೆ. ಜನರ ಜೀವಹಿಂಡುತ್ತಿರುವ ಈ ಕಾಯಿಲೆ ಮಂಗನಿಂದಲೇ ಹಬ್ಬುತ್ತಿರುವುದು.

1957 ರಲ್ಲಿ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಕ್ಯಾಸನೂರು ಅರಣ್ಯ ಪ್ರದೇಶಗಳಲ್ಲಿ